ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕೆ.ಆರ್.ವೃತ್ತ, ಬೆಂಗಳೂರು–01

## ಸಹಾಯಕ ಹುದ್ದೆಯ ನೇಮಕಾತಿ

**ಉದ್ಯೋಗ ನೇಮಕಾತಿ ಪ್ರಕಟಣೆ ಸಂಖ್ಯೆ: ಬೆವಿಕಂ/ಬಿಸಿ–50/2527/2014-15,**

**ದಿನಾಂಕ: 07/03/2015**

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು "ಸಹಾಯಕ" ಹುದ್ದೆಗಳನ್ನು ಭರ್ತಿ ಮಾಡಲು **'ಕರ್ನಾಟಕ ರಾಜ್ಯದಲ್ಲಿ ಮನ್ನಣೆಯಾದ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದಿರುವ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ'** ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ " ಆನ್‌ಲೈನ್" (ONLINE)ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವೇತನ ಶ್ರೇಣಿ ರೂ10250-300-11750-360-13910-420-16850-510-18890-570-20600-620-23080-700- 25180

ಅ) **ಹುದ್ದೆಗಳ ವರ್ಗೀಕರಣ:**

| ಕ್ರಮ ಸಂಖ್ಯೆ | ಸಮತಳ ಮೀಸಲಾತಿ | ಪ.ಜಾ | ಪ.ವ | ಸಾಮಾನ್ಯ | ಪ್ರ– I | ಪ್ರ– II A | ಪ್ರ– II B | ಪ್ರ– III A | ಪ್ರ– III B | ಒಟ್ಟು |
|---|---|---|---|---|---|---|---|---|---|---|
| 1 | ಸಾಮಾನ್ಯ | 07 | 02 | 24 | 02 | 07 | 02 | 02 | 03 | 49 |
| 2 | ಮಹಿಳಾ ಅಭ್ಯರ್ಥಿ | 11 | 02 | 36 | 03 | 11 | 03 | 03 | 03 | 72 |
| 3 | ಗ್ರಾಮೀಣ ಮೀಸಲಾತಿ | 10 | 02 | 30 | 03 | 10 | 03 | 03 | 03 | 64 |
| 4 | ಮಾಜಿ ಸೈನಿಕರು | 03 | - | 11 | 01 | 03 | 01 | - | 01 | 20 |
| 5 | ಕನ್ನಡ ಮಾಧ್ಯಮ ಅಭ್ಯರ್ಥಿ | 02 | - | 06 | - | 02 | - | - | - | 10 |
| 6 | ಯೋಜನೆ ನಿರಾಶ್ರಿತ ಅಭ್ಯರ್ಥಿ | 01 | - | 06 | - | 01 | - | - | - | 08 |
| 7 | ಅಂಗವಿಕಲ ಅಭ್ಯರ್ಥಿ | 02 | 01 | 06 | 01 | 02 | 01 | 01 | 01 | 15 |
| ಒಟ್ಟು | | 36 | 07 | 119 | 10 | 36 | 10 | 09 | 11 | 238 |

**ಸೂಚನೆ:** ಸಹಾಯಕ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಬೆವಿಕಂ ವ್ಯಾಪ್ತಿಯಲ್ಲಿನ ಯಾವುದೇ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗುವುದು ಹಾಗೂ ಖಾಲಿ ಇರುವ ಸ್ಥಳಗಳಿಗೆ ಸಮಾಲೋಚನೆ ಮುಖಾಂತರ ಮೆರಿಟ್ ಆಧಾರದ ಮೇಲೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

ಆ) **ಅಗತ್ಯ ವಿದ್ಯಾರ್ಹತೆ:**

'ಕರ್ನಾಟಕ ರಾಜ್ಯದಲ್ಲಿ ಮನ್ನಣೆಯಾದ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದಿರುವ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.

**ಸೂಚನೆ:**

1) ಮೇಲೆ ತಿಳಿಸಿರುವ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳಲ್ಲಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.

2) ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳನ್ನು ಈ ಕೆಳಗಿನಂತೆ ಪರಿಗಣಿಸಲಾಗುವುದು–
   - ವಾರ್ಷಿಕ ಆಧಾರದ ಪರೀಕ್ಷೆಯಲ್ಲಿ ಅಭ್ಯರ್ಥಿಯು ಎಲ್ಲಾ ವರ್ಷಗಳಲ್ಲಿ ಗಳಿಸಿದ ಶೇಕಡಾವಾರು ಅಂಕ.
   - ಸೆಮಿಸ್ಟರ್ ಆಧಾರದ ಪರೀಕ್ಷೆಯಲ್ಲಿ ಅಭ್ಯರ್ಥಿಯು ಎಲ್ಲಾ ಸೆಮಿಸ್ಟರ್‌ಗಳಲ್ಲಿ ಗಳಿಸಿದ ಶೇಕಡಾವಾರು ಅಂಕ.
3) ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿರುವ ಅಂತಿಮ ದಿನಾಂಕದೊಳಗಾಗಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಿಕೊಳ್ಳತಕ್ಕದ್ದು.
4) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನಹೊಂದಿರತಕ್ಕದ್ದು.
5) ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಿಸುವ ಜ್ಞಾನಹೊಂದಿರತಕ್ಕದ್ದು.

ಇ) <u>ಅರ್ಹತೆ:</u>

ಅರ್ಹತಾದಾಯಕ ಪರೀಕ್ಷೆಗಳಲ್ಲಿ ಕೆಳಗೆ ತಿಳಿಸಿರುವಷ್ಟು ಕನಿಷ್ಠ ಶೇಕಡವಾರು ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮಾತ್ರ ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

| ಕ್ರ . ಸಂ. | ಪ್ರವರ್ಗ | ಶೇಕಡಾವಾರು |
|---|---|---|
| 1. | ಸಾಮಾನ್ಯ ಅರ್ಹತೆಗೆ ಸೇರಿದ ಅಭ್ಯರ್ಥಿಗಳು | 60% |
| 2. | ಪ್ರವರ್ಗ– I, IIA, IIB, IIIA ಮತ್ತು IIIB ಗೆ ಸೇರಿದ ಅಭ್ಯರ್ಥಿಗಳು | 50% |
| 3. | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | ತೇರ್ಗಡೆ |

ಈ) <u>ಆಯ್ಕೆ:</u>

i) ಮೇಲಿನ ಹುದ್ದೆಗಳಿಗೆ ಆಯ್ಕೆಯನ್ನು ಸಾಮಾನ್ಯ ಪರೀಕ್ಷೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಠತೆ ಹಾಗು ಮೀಸಲಾತಿ ಆಧಾರದ ಮೇಲೆ ಮಾತ್ರವೇ ಮಾಡಲಾಗುವುದು.

ii) ಸಾಮಾನ್ಯ ಪರೀಕ್ಷೆಯ ದಿನಾಂಕವನ್ನು ಪತ್ರಿಕೆ ಹಾಗು ಬೆವಿಕಂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಈ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಯಾವುದೇ ಸೂಚನಾ ಪತ್ರವನ್ನು ಕಳುಹಿಸಲಾಗುವುದಿಲ್ಲ.

ಉ) <u>ವಯೋಮಿತಿ:</u>

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷ ತುಂಬಿದವರಾಗಿರಬೇಕು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

i) ಸಾಮಾನ್ಯ ಅರ್ಹತೆಗೆ ಸೇರಿದ ಅಭ್ಯರ್ಥಿಗಳು – 35 ವರ್ಷಗಳು

ii) ಪ್ರವರ್ಗ IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ – 38 ವರ್ಷಗಳು

iii) ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಮತ್ತು ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು – 40 ವರ್ಷಗಳು

<u>ಟಿಪ್ಪಣಿ:–</u>

a) ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳಷ್ಟು ಸೇರಿಸಿ, ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಗರಿಷ್ಠ 45 ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

b) ಕವಿಪ್ರನಿನಿ/ಎಸ್ಕಾಂಗಳಲ್ಲಿ ಈಗಾಗಲೇ ಖಾಯಂ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ, ಅವರು ಕವಿಪ್ರನಿನಿ/ ಎಸ್ಕಾಂಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು, ಗರಿಷ್ಠ ಏಳು ವರ್ಷಗಳ ಮಿತಿಗೊಳಪಟ್ಟು ಸಡಿಲಿಕೆಯನ್ನು ನೀಡಲಾಗುವುದು.

ಊ) **<u>ಅರ್ಜಿ ಶುಲ್ಕ:</u>**

1) ಸಾಮಾನ್ಯ ಅರ್ಹತೆ ಮತ್ತು ಪ್ರವರ್ಗ I, IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ– ರೂ500/- (ಐದು ನೂರು ರೂಪಾಯಿಗಳು ಮಾತ್ರ).
2) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ– ರೂ250/- (ಎರಡು ನೂರು ಐವತ್ತು ರೂಪಾಯಿಗಳು ಮಾತ್ರ).

ಎ) **<u>ಅರ್ಜಿ ಸಲ್ಲಿಸುವ ವಿಧಾನ:</u>**

1) ಅರ್ಜಿಯನ್ನು ಕಡ್ಡಾಯವಾಗಿ ಬೆವಿಕಂ ವೆಬ್‌ಸೈಟ್<u>www.bescom.org</u> ಮೂಲಕ, "ಆನ್ ಲೈನ್" ನಲ್ಲಿ ಮೂಲಕ ಸಲ್ಲಿಸಬೇಕು. ಇತರೇ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
2) ಅಭ್ಯರ್ಥಿಗಳು ಇ–ಮೇಲ್ ಐಡಿ ಹಾಗು ಮೊಬೈಲ್ ನಂಬರ್‌ಗಳನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ಭರ್ತಿ ಮಾಡತಕ್ಕದ್ದು.
3) "ಆನ್ ಲೈನ್" ಅರ್ಜಿ ಸಲ್ಲಿಸಲು ವೆಬ್‌ಸೈಟ್ ಸೌಲಭ್ಯವನ್ನು ದಿನಾಂಕ: **11/03/2015** ರಿಂದ **09/04/2015** ವರೆಗೆ ಮಾತ್ರ ಅವಕಾಶವಿರುತ್ತದೆ.
4) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕೂ ತಿದ್ದುಪಡಿಗೆ ಅವಕಾಶವಿರುವುದಿಲ್ಲ.
5) ಒಂದು ವೇಳೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುದಿಲ್ಲ.
6) ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು "ಆನ್ ಲೈನ್" ನಲ್ಲಿ ಲಭ್ಯವಿರುವ ಅಂಚೆ ಕಛೇರಿ ಇ–ಚಲನ್' ಮೂಲಕ ಗಣಕೀಕೃತ ಅಂಚೆ ಕಛೇರಿಯಲ್ಲಿ ಮಾತ್ರ ಪಾವತಿಸತಕ್ಕದ್ದು.
7) ದಿನಾಂಕ: **11/03/2015** ರಿಂದ ದಿನಾಂಕ: **10/04/2015** ರ ವರೆಗೆ ಅಂಚೆ ಕಛೇರಿ ವ್ಯವಹಾರದ ವೇಳೆಯಲ್ಲಿ "ಆನ್ ಲೈನ್" ನಲ್ಲಿ ಲಭ್ಯವಿರುವ ಅಂಚೆ ಕಛೇರಿ ಇ–ಚಲನ್' ಮೂಲಕ ಅರ್ಜಿ ಶುಲ್ಕವನ್ನು ಪಾವತಿಸುವ ಅರ್ಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.
8) ಅರ್ಜಿ ಶುಲ್ಕವನ್ನು ದಿನಾಂಕ:– **11/03/2015** ರಿಂದ ದಿನಾಂಕ: **10/04/2015** ರ ವರೆಗೆ ಅಂಚೆ ಕಛೇರಿ ವ್ಯವಹಾರದ ವೇಳೆಯನ್ನು ಹೊರತು ಪಡಿಸಿ, ನಿಗದಿತ ಅವಧಿಯ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಯಾವುದೇ ನೇಮಕಾತಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.
9) "ಆನ್‌ಲೈನ್" ಅರ್ಜಿಗಳನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಅಂಚೆ ಕಛೇರಿ ಇ–ಚಲನ್' ಪ್ರತಿಗಳ ಮುದ್ರಿತ (printout) ಪ್ರತಿ ತೆಗೆದುಕೊಳ್ಳತಕ್ಕದ್ದು.
10) **ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ <u>www.karnatakapost.gov.in</u> ನಲ್ಲಿ ಅರ್ಜಿ ಶುಲ್ಕ ಪಾವತಿಸಿದ 48 ಗಂಟೆಗಳ ನಂತರ ದೃಢಪಡಿಸಿಕೊಳ್ಳಬಹುದಾಗಿದೆ. ಪಾವತಿ ಸಂದರ್ಭದಲ್ಲಿ ಯಾವುದೇ ಸ್ಪಷ್ಟೀಕರಣಕ್ಕಾಗಿ ಅಭ್ಯರ್ಥಿಗಳು ಸಹಾಯವಾಣಿ ದೂರವಾಣಿ ಸಂಖ್ಯೆ:–080-22392668 ಅಥವಾ ಇ–ಮೇಲ್ ವಿಳಾಸ:– <u>apmgbdco@gmail.com</u> ಸಂಪರ್ಕಿಸುವುದು.**
11) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಎ)<u>ಸಾಮಾನ್ಯ ಸೂಚನೆಗಳು:</u>

**a)** ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**b)** ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟಿದ್ದರೆ ಅಥವಾ ಕೇಂದ್ರ ಲೋಕ ಸೇವಾ/ರಾಜ್ಯ ಲೋಕ ಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ಕಂಪನಿಯು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದ್ದಲ್ಲಿ ಮಾತ್ರ ನೇಮಕಾತಿಗೆ ಅರ್ಹನಾಗಿರುತ್ತಾನೆ.

**c)** ಅರ್ಜಿಯಲ್ಲಿ ಸುಳ್ಳು ಮಾಹಿತಿಯನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

**d)** ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು, ಪತ್ರವ್ಯವಹಾರವನ್ನು ಅದೇ ವಿಳಾಸದೊಂದಿಗೆ ನಡೆಸಲಾಗುವುದು. ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

**e)** ಅವಶ್ಯಕ ವಿದ್ಯಾರ್ಹತೆಯ ಪರೀಕ್ಷೆಗೆ ಕುಳಿತಿದ್ದು, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಪರೀಕ್ಷಾ ಫಲಿತಾಂಶ ಪ್ರಕಟವಾಗದಿರುವಂತಹ, ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ.

**f)** ಅರ್ಜಿಗಳನ್ನು 'ಆನ್‌ಲೈನ್'ದಲ್ಲಿ ಭರ್ತಿಮಾಡುವ ಪೂರ್ವದಲ್ಲಿ, ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

**g)** ಅಭ್ಯರ್ಥಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗI, IIA, IIB, IIIA ಮತ್ತು IIIB ಯಲ್ಲಿನ ಮೀಸಲಾತಿಗೆ ಹಾಗೂ ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನದಂಡವನ್ನು ತಿಳಿದಿರತಕ್ಕದ್ದು.

**h)** ಅಭ್ಯರ್ಥಿಗಳ ಅರ್ಹತೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

**i)** ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

**j)** ಅಭ್ಯರ್ಥಿಗಳು ಮೂಲ ದಾಖಲಾತಿಗಳು/ ಪ್ರಮಾಣ ಪತ್ರಗಳ ಇತರೆಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ 'ದೃಢೀಕೃತ ಪ್ರತಿ' ಗಳೊಂದಿಗೆ ಹಾಜರುಪಡಿಸತಕ್ಕದ್ದು.

**k)** ಕಂಪನಿಯು ಯಾವುದೇ ಹಂತದಲ್ಲಾದರೂ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಾಗೂ ಅಗತ್ಯವಿದ್ದಲ್ಲಿ, ಹೊಸದಾಗಿ/ತಿದ್ದುಪಡಿ ಪ್ರಕಟಣೆ ನೀಡುವಹಕ್ಕನ್ನು ಕಾಯ್ದಿರಿಸಿದೆ.

**l)** ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುವಾಗ ನೇಮಕಾತಿ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅವಕಾಶವಿರುವುದಿಲ್ಲ.

**m)** ಅಭ್ಯರ್ಥಿಗಳು ಯಾವುದೇ ಪ್ರವರ್ಗದಡಿಯಲ್ಲಿ ಅರ್ಜಿ ಸಲ್ಲಿಸಿ ಸಾಮಾನ್ಯವರ್ಗದಡಿಯಲ್ಲಿ ಅಯ್ಕೆಯಾಗುವಂತಹ ಅಭ್ಯರ್ಥಿಗಳು ಸಂಬಂಧಿಸಿ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಹಾಜರುಪಡಿಸಿದ ನಂತರವೇ ನೇಮಕಾತಿ ಆದೇಶ ಹೊರಡಿಸಲಾಗುವುದು.

**n)** ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳ ಮಾಹಿತಿಯು ಬೆವಿಕಂ ವೆಬ್‌ಸೈಟ್<u>www.bescom.org</u> ನಲ್ಲಿ ಲಭ್ಯಗೊಳಿಸಲಾಗುವುದು.

ಒ)<u>ಸಮತಳ ಮೀಸಲಾತಿ:</u>

| | | |
|---|---|---|
| i | ಗ್ರಾಮೀಣ ಅಭ್ಯರ್ಥಿ | ಗ್ರಾಮೀಣ ಮೀಸಲಾತಿ ಪಡೆಯ ಬಯಸುವ ಅಭ್ಯರ್ಥಿಗಳು, ಸರ್ಕಾರವು ತನ್ನ ಆದೇಶ ಸಂಖ್ಯೆ: DPAR 96 SRR 2005, ದಿನಾಂಕದ: 10.08.2005 ರಲ್ಲಿ ಸೂಚಿಸಿರುವ,.ಗ್ರಾಮೀಣ ಪ್ರದೇಶಗಳಲ್ಲಿ ಒಂದನೇ ತರಗತಿಯಿಂದ, ಹತ್ತನೇ ತರಗತಿವರೆಗೆ ನಿರಂತರವಾಗಿ ವ್ಯಾಸಂಗ ಮಾಡಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗಧಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| ii | ಮಾಜಿ ಸೈನಿಕರು | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಪ್ರಮಾಣ ಪತ್ರ ಹೊಂದಿರಬೇಕು. |
| iii | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ಕನ್ನಡ ಮಾಧ್ಯಮದಲ್ಲಿ ನಿರಂತರವಾಗಿ ಒಂದನೇ ತರಗತಿಯಿಂದ, ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡಿರುವದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗಧಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| iv | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಯೋಜನೆಗಳಿಗಾಗಿ ಮನೆ/ಜಮೀನುಗಳನ್ನು ಕಳೆದುಕೊಂಡಿರುವುದಕ್ಕೆ ಮನೆ/ಜಮೀನುಗಳನ್ನು ವಶಪಡಿಸಿಕೊಂಡ ಸಂಬಂಧಪಟ್ಟ ಸಕ್ಷಮ ಸರ್ಕಾರಿ ಪ್ರಾಧಿಕಾರಿಯಿಂದ, ನೀಡಲ್ಪಟ್ಟ 'ಯೋಜನಾ ನಿರಾಶ್ರಿತ ಪ್ರಮಾಣ ಪತ್ರ' ಗಳನ್ನು ಹೊಂದಿರಬೇಕು. |
| v | ಅಂಗವಿಕಲ ಅಭ್ಯರ್ಥಿ | ಮೂಳೆ, ಸ್ನಾಯು ಮತ್ತು ಕೀಲು ಇವುಗಳ ಸಾಮಾನ್ಯ ನಿರ್ವಹಣೆಗೆ ಅಡ್ಡಿ ಬರುವಂತಹ ಕಾರಣದ ಶೇಕಡಾ 40 ರಷ್ಟು ದೈಹಿಕ ನ್ಯೂನತೆ ಅಥವಾ ಅಂಗವಿಕಲತೆಯ ಶಾರೀರಿಕ ಸಾಮರ್ಥ್ಯದ ಬಗ್ಗೆ ವೈದ್ಯಾಧಿಕಾರಿಗಳಿಂದ ನೀಡಲಾದ ವೈದ್ಯಕೀಯ ಪ್ರಮಾಣ ಪತ್ರ ಹೊಂದಿರತಕ್ಕದ್ದು. |

| | | |
|---|---|---|
| 1. | ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 11.03.2015 |
| 2. | ಆನ್‌ಲೈನ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | 09.04.2015 ಸಂಜೆ 4.00 ಗಂಟೆಯವರೆಗೆ |
| 3. | ಅರ್ಜಿ ಶುಲ್ಕ ಪಾವತಿಗೆ ನಿಗದಿಪಡಿಸಿರುವ ಅಂತಿಮ ದಿನಾಂಕ | 10.04.2015 ಅಂಚೆ ಕಛೇರಿ ವ್ಯವಹಾರ ವೇಳೆಯ ಒಳಗೆ |

**ಸೂಚನೆ:- ನೇಮಕಾತಿ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಬೆವಿಕಂ ವೆಬ್‌ಸೈಟ್ <u>www.bescom.org</u> ನಲ್ಲಿ ಪ್ರಕಟಿಸಲಾಗುವುದು. ಈ ಬಗ್ಗೆ ಅಭ್ಯರ್ಥಿಗಳು ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಲು ತಿಳಿಯಪಡಿಸಿದೆ.**

ಸಹಿ/-

**ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)**
**ಬೆವಿಕಂ**